ಈಶ್ವರ ಬಿರಬಿರನೆ ಹೆಜ್ಜೆ ಹಾಕುತ್ತಿದ್ದ. ಅಲ್ಲೆಲ್ಲ ಬಹಳ ಬದಲಾವಣೆಯಾಗಿತ್ತು. ಹೊಸ ಹೆಂಚಿನ ಮನೆಗಳು ಬಂದಿದ್ದವು. ಶರಾವತಿಯ ನೀರು ಎರಡೂ ಕೈಯಲ್ಲಿ ಅಪ್ಪಿಕೊಂಡು ನಿರ್ಮಿಸಿದ ನಡುಗಡ್ಡೆಯ ಸಣ್ಣ ಊರಲ್ಲಿ ಆಗ ತಮ್ಮದೊಂದೆ ಮಂಗಳೂರು ಹಂಚಿನ ಎರಡಂತಸ್ತಿನ ಮನೆ. ಅದೆಲ್ಲಿ ಅಂತ ಹುಡುಕುತ್ತ ಬೀಸುಗಾಲು ಹಾಕುತ್ತಿದ್ದವನ ಕಾಲು ತಡೆಯುತ್ತಿತ್ತು. ಸಹನೆ ಮೀರಿದ ಈಶ್ವರ, 'ಮನೆ ಎಲ್ಲಿ ಹೋಯ್ತೋ...' ಅಂದದ್ದಕ್ಕೆ ಚುರುಕಾದ ಕೇಶವ ಅತ್ತ ಇತ್ತ ನೋಡಿ ನೆನಪು ಮಾಡಿಕೊಂಡು ನಾಕುಮಾರು ಹೋಗಿ, 'ಅದೇ ಅಲ್ಲಿ' ಅಂತ ತೋರಿಸಿದ. ಕರಿಗಟ್ಟಿದ ಹಂಚಿನಮೇಲೆ ಕಳೆ ಬೆಳೆದು ಮಾಡು ಜರಿದಿತ್ತು. ಒಳಗೆಲ್ಲ ನೀರು ಸೋರಿ ನೆಲ ಮಣ್ಣುಮಯವಾಗಿತ್ತು. ಗೋಡೆ ಇನ್ನೇನು ಬೀಳುವಂತಿತ್ತು. ಹಿತ್ತಲ ಬೇಲಿ ನಾಮಾವಶೇಷವಾಗಿ ಬಂದಲಿಕೆ ತುಂಬಿದ ಮಾವಿನಗಿಡದಡಿ ಬಡಕಲು ಎಮ್ಮೆಯೊಂದು ಅಲಕ್ಷ್ಯದಲ್ಲಿ ಮಲಗಿತ್ತು. 'ಇದ್ಯಾಕೆ ಹಿಂಗದೆಯೋ' ಚೀರುವಂತೆ ಕೇಳಿದ ಈಶ್ವರ ಮನೆಯ ಕಸ ತುಂಬಿದ ಕಟ್ಟೆಯಮೇಲೆ ಕುಳಿತ. 'ನಾನು ಬೆಂಗಳೂರಲ್ಲಿ, ಚಂದ್ರು ಹೊನ್ನಾವರದಲ್ಲೆ ಮನೆ ಮಾಡ್ತಾನೆ. ನನ್ನ ಎರಡ್ನೇ ಮಗ ಪರಶ್‌ರಾಮಗೆ ತೋಟದ ಕೆಲಸದಲ್ಲೆ ಸಮಾ ಆಗ್ತದೆ. ಪುರುಸೊತ್ತು ಸಿಗಬೇಕಲ್ಲ ಅಣ್ಣ...' ಗೊಣಗುವಂತೆ ವಿಷಾದ ಹೊರ ಹಾಕಿದ್ದು ಈಶ್ವರನ ಕಿವಿಗೆ ಕೇಳಿಸಲಿಲ್ಲ. ಇದೇ ಮನೆಯಲ್ಲಿ ತಾನು ಬೆಳೆದದ್ದು. ಮುರುಡೇಶ್ವರದ ಗಜಾನನ ನಾಯ್ಕರು ಬಯಸಿ ಬಂದು ಸಂಬಂಧ ಬೆಳೆಸಿದ್ದು. ಬೆಳ್ಳಗೆ ತೆಳ್ಳಗೆ ಚಂದವಾಗಿದ್ದ ತಮ್ಮ ಮಗಳನ್ನು ಸರಕಾರಿ ನೌಕರೀಲಿರೋನಿಗೆ, ಶಹರದ ಸಂಬಂಧಕ್ಕೆ ಕೊಡಬಹುದಿತ್ತು. ತಮ್ಮ ತೂಕ ಹಾಗಿತ್ತು ಇಲ್ಲಿ. ಓ ಅಲ್ಲಿ... ಇದೇ ಹಿತ್ತಲಲ್ಲಿ ಕಟ್ಟಿದ ಹಗ್ಗದ ನ್ಯಾಲೆ. ತೊಳೆದ ಸೀರೆ ಒಣಹಾಕುತ್ತಿರುವ ತರುಣಿ, ಎತ್ತರದ ನ್ಯಾಲೆಗೆ ಕೈಯೆತ್ತಿದ್ದಕ್ಕೆ ಬಿಲ್ಲಿನಂತೆ ಬಾಗಿದ ತೆಳುಹೊಟ್ಟೆಯ ಸೀಳು ಹೊಕ್ಕಳು, ಮುಂದೆ ಚಾಚಿದ ಎದೆಗಳು. ಮುಖದಮೇಲೆ ಬರುವ ಒದ್ದೆಕೂದಲನ್ನು ಮುಂಗೈಯಲ್ಲಿ ಹಿಂದೆ ಸರಿಸುತ್ತ... ಅವನ ಹೊಕ್ಕುಳ ಕೆಳಗೆ ಏನೋ ಗಟ್ಟಿಯಾಗುತ್ತ ಚುಳ್ ಅನುವ ನೋವು ಮೂಡಿತು. 'ವತ್ಸಲಾನ

